

ನವದೆಹಲಿಯ ಕಲ್ಕಾಜಿಯಲ್ಲಿ ಬಹಾಯಿ ಧರ್ಮಕ್ಕೆ ಸೇರಿದ 'ಲೋಟಸ್ ಟೆಂಪಲ್' ಎಂಬ ಸುಂದರ ದೇವಾಲಯವಿದೆ. ಕಮಲದ ಹೂವಿನ ಆಕಾರದಲ್ಲಿ ಇದರ ವಿನ್ಯಾಸವಿದೆ. ದೂರದಿಂದ ನೋಡಲು ಅರಳಿರುವ ಬಿಳಿಯ ತಾವರೆಯಂತೆ ಸುಂದರವಾಗಿದೆ. ಈ ವಿಶಿಷ್ಟ ದೇವಾಲಯದ ಸುತ್ತಲೂ ಅಮೃತಶಿಲೆಯಿಂದ ರಚಿತವಾದ ಅರ್ಧ ಅರಳಿರುವ 27 ದಳಗಳಿವೆ. ಕೆಳಭಾಗದ ದಳಗಳು ಪೂರ್ಣ ಅರಳಿ ಹೊರಕ್ಕೆ ಚಾಚಿದಂತಿವೆ.

ಲೋಟಸ್ ಟೆಂಪಲ್ ಎಂದೇ ಹೆಸರಾಗಿರುವ ಈ ದೇವಾಲಯ ನಿರ್ಮಾಣದ ಕಾರ್ಯ ಹತ್ತು ವರ್ಷಗಳ ಕಾಲ ನಡೆದಿದೆ. ಸುಮಾರು ಎಂಟುನೂರು ಇಂಜಿನಿಯರ್‌ಗಳು, ಹಲವಾರು ತಂತ್ರಜ್ಞರು ಹಾಗೂ ಕುಶಲಕರ್ಮಿಗಳು ಇದಕ್ಕೆಂದೇ ಶ್ರಮ ವಹಿಸಿದ್ದಾರೆ. 1986ರಲ್ಲಿ ಈ ದೇವಾಲಯ ಲೋಕಾರ್ಪಣೆಗೊಂಡಿತು. ಬಹಾಯಿ ಧರ್ಮದವರ ದೇವಾಲಯವಾಗಿದ್ದರೂ ಎಲ್ಲ ಧರ್ಮೀಯರಿಗೂ ಇಲ್ಲಿ ಮುಕ್ತ ಪ್ರವೇಶವಿದೆ. ಇದರ ಸುಂದರ ವಿನ್ಯಾಸ, ವಾಸ್ತುಶಿಲ್ಪ ವಿಶ್ವದೆಲ್ಲೆಡೆ ಮನ್ನಣೆ ಪಡೆದಿದೆ. ಅತಿ ಹೆಚ್ಚು ಪ್ರವಾಸಿಗರು ಭೇಟಿ ನೀಡುವ ಭಾರತದ ಸ್ಮಾರಕಗಳಲ್ಲಿ ಇದೂ ಒಂದು.

ಬಹಾಯಿ ಧರ್ಮವು 19 ನೇ ಶತಮಾನದಲ್ಲಿ ಪರ್ಶಿಯಾದಲ್ಲಿ ಬಹಾಉಲ್ಲಾ ಅವರಿಂದ ಸ್ಥಾಪಿತವಾಯಿತು. 'ಮಾನವ ಜನಾಂಗವೆಲ್ಲಾ ಒಂದು, ಇಡೀ ಪೃಥ್ವಿಯೇ ಒಂದು ರಾಷ್ಟ್ರ ಮತ್ತು ಎಲ್ಲಾ ಜನರೂ ಅದರ ಪ್ರಜೆಗಳು' ಎಂಬುದೇ ಈ ಧರ್ಮದ ಘೋಷಣೆ. ದೇವರು ಒಬ್ಬನೇ ಎಂಬ ಧಾರ್ಮಿಕ ಸತ್ಯಕ್ಕೆ ಪೂರಕವಾದ ಇದು ಸ್ವತಂತ್ರವಾದ ವಿಶ್ವಧರ್ಮವಾಗಿದೆ. ವಿಶ್ವದಾದ್ಯಂತ ಸುಮಾರು 5-6 ದಶಲಕ್ಷ ಜನರು ಈ ಧರ್ಮದ ಪಾಲಕರಾಗಿದ್ದಾರೆ. ಭಾರತದಲ್ಲಿ ಸುಮಾರು 35,000 ಕ್ಕೂ ಹೆಚ್ಚು ಜನರು ವಿವಿಧ ಸ್ಥಳಗಳಲ್ಲಿ ವಾಸಿಸುತ್ತಿದ್ದಾರೆ. ಪ್ರಪಂಚದಾದ್ಯಂತ ಇನ್ನೂ ಆರು ಬಹಾಯಿ ದೇವಾಲಯಗಳಿವೆ.





ಪ್ರಮುಖ ಕಟ್ಟಡವನ್ನು ಸುತ್ತುವರೆದಿರುವ ಕೊಳ

ದೇವಾಲಯವನ್ನು ಕಟ್ಟಲು ಡಾಲೋಮೈಟ್, ಸಿಮೆಂಟ್, ಮರಳು, ಮಾರ್ಬಲ್ ಬಳಸಲಾಗಿದೆ. ತಾವರೆಯ ದಳಗಳಿಗೆ ಸ್ಟೀಲ್ ಉಪಯೋಗಿಸ-ಲಾಗಿದೆ. ಲೋಟಸ್ ದೇವಾಲಯದಲ್ಲಿ ಸುಮಾರು 2500 ದಷ್ಟು ಜನರು ಹಿಡಿಸಬಹುದಾದ ಒಂದು ಕೇಂದ್ರ ಹಜಾರಕ್ಕೆ ಕಮಲದ ದಳಗಳಂತಹ ಒಂಬತ್ತು ಬಾಗಿಲುಗಳಿವೆ. ಕೇಂದ್ರ ಹಜಾರವು 40 ಮೀಟರಿ-ಗಿಂತ ಹೆಚ್ಚು ಎತ್ತರವಿದೆ. ಅದರ ಮೇಲ್ಮೈ ಅಮೃತಶಿಲೆಯಿಂದಲೇ ಮಾಡಲ್ಪಟ್ಟಿದೆ. ಇಲ್ಲಿ ಉಪಯೋಗಿಸಿರುವ ಅಮೃತಶಿಲೆಗಳನ್ನು ಗ್ರೀಸ್ ದೇಶದ ಪೆಂಟಲಿ ಪರ್ವತದಿಂದ ತರಿಸಲಾಗಿದೆ. ಈ ಕಟ್ಟಡದ ಜೊತೆಗೆ ಸುತ್ತುವರೆದ 9 ಕೊಳಗಳಿವೆ. ಅದರ ಸುತ್ತಲೂ ಸುಂದರ ತೋಟವಿದೆ.

ಲೋಟಸ್ ಟೆಂಪಲ್ ಎಲ್ಲಾ ಧರ್ಮಗಳವರೂ ಹೆಸರು, ಜಾತಿ, ಮತ, ಪಂಗಡ ಭೇದವಿಲ್ಲದೇ ಕಟ್ಟುಪಾಡುಗಳಿಲ್ಲದೇ ಆರಾಧಿಸುವ ಸ್ಥಾನವಾಗಿದೆ. ಬಹಾಯಿ ಹಾಗೂ ಇತರ ಧರ್ಮದ ಪವಿತ್ರ ಸನಾತನ ಧರ್ಮದ ಗ್ರಂಥಗಳನ್ನು ಇದರ ಒಳಗಡೆ ಯಾವುದೇ ಭಾಷೆಯಲ್ಲಿ ಓದಬಹುದು ಅಥವಾ ಮಂತ್ರ ಪಠಿಸಬಹುದು. ಆದರೆ ಸಂಗೀತ ವಾದ್ಯ ಪ್ರವಚನ ಮುಂತಾದ ಧಾರ್ಮಿಕ ಕ್ರಿಯೆಗಳಾಗಲೀ ಧಾರ್ಮಿಕ ಸಮಾರಂಭಗಳಾಗಲೀ ಆಚಾರ ವಿಚಾರದ ಯಾವುದೇ ವಿಧಿ ವಿಧಾನಗಳಾಗಲೀ ಇಲ್ಲಿ ನಡೆಯವಂತಿಲ್ಲ.

ಒಂದು ಗುಮ್ಮಟವಿರುವ ಬಹಾಯಿ ಕಟ್ಟಡಗಳು ಇದ್ದರೂ ಅದು ಅವರ ವಾಸ್ತುಶಿಲ್ಪದ ಅತ್ಯಗತ್ಯ ಭಾಗವೆಂದು ಪರಿಗಣಿಸಲ್ಪಟ್ಟಿಲ್ಲ. ಆದರೆ ಒಳಗೆ ಯಾವುದೇ ಚಿತ್ರಗಳು ಪ್ರತಿಮೆಗಳು ಮೂರ್ತಿಗಳು ಪ್ರದರ್ಶಿತವಾಗಬಾರದೆಂದು ಅವರ ಧರ್ಮಗ್ರಂಥಗಳು ಹೇಳುತ್ತವೆ. ಪ್ರವಚನಕಾರರ ಪೀಠವಾಗಲೀ, ಪವಿತ್ರ ಸ್ಥಾನವಾಗಲೀ ವಾಸ್ತುಶಿಲ್ಪದ ವಿಶೇಷ ಸಂಯೋಜನೆಯಾಗಲಿ ಇರಬಾರದೆನ್ನುವ ನಿಯಮವಿದೆ.

ಈ ದೇವಾಲಯವು ವೃತ್ತಿಪರ ವಾಸ್ತುಶಿಲ್ಪ, ಅದ್ಭುತ ಕಲೆ ಮತ್ತು ಕುಶಲ ಕಾಮಗಾರಿಯ ಪ್ರತೀಕವಾಗಿದೆ. ಕಮಲದ ಹೂವಿನ ಈ ದೇವಾಲಯವು ಪ್ರಾರಂಭವಾದಂದಿನಿಂದ ಈತನಕ ದೇಶ-ವಿದೇಶಗಳ ಸುಮಾರು 50 ದಶಲಕ್ಷ ಜನರು ಇಲ್ಲಿಗೆ ಭೇಟಿ ನೀಡಿದ್ದಾರೆ. ಇದರ ನವೀನ ರೂಪವೇ ಇಷ್ಟೊಂದು ಜನಾಕರ್ಷಣೆಗೆ ಕಾರಣ. ಇಂಥ ಕಣ್ಮನ ಸೆಳೆವ ಸುಂದರವಾದ ವಾಸ್ತುಶಿಲ್ಪವನ್ನು ಕೆನಡಾವಾಸಿ ಪರ್ಷಿಯನ್ ವಾಸ್ತುಶಿಲ್ಪಿ ಫರಿಬೋರ್ಜ್ ಸಹ್ಬ ವಿನ್ಯಾಸಗೊಳಿಸಿದ್ದಾರೆ . ಈ ಕಟ್ಟಡದ ವಿನ್ಯಾಸಕ್ಕಾಗಿ ಅಮೆರಿಕಾ ಸಂಸ್ಥೆಯೊಂದು ಸಹ್ಬಾರವರಿಗೆ ಪ್ರಶಸ್ತಿ ನೀಡಿ ಗೌರವಿಸಿದೆ. ಕಟ್ಟಡಕ್ಕೆ ಧಾರ್ಮಿಕ ಕಲೆ ಮತ್ತು ವಾಸ್ತುಶಿಲ್ಪದ ಉತ್ಕೃಷ್ಟತೆಯ ಪ್ರಶಸ್ತಿಯೂ ಸಂದಿದೆ.

ಬೇಸಿಗೆ ಕಾಲದಲ್ಲಿ ಸೋಮವಾರ ಹೊರತುಪಡಿಸಿ ಪ್ರತಿದಿನ ಬೆಳಿಗ್ಗೆ 9 ರಿಂದ ಸಂಜೆ 7 ಗಂಟೆಯವರೆಗೆ, ಚಳಿಗಾಲದಲ್ಲಿ 9.30 ರಿಂದ 5.30 ರವರೆಗೆ ದೇವಾಲಯಕ್ಕೆ ಭೇಟಿ ನೀಡಬಹುದು.